**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.14/2023**

**ಪಿರ್ಯಾದುದಾರರು** ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

**-ವಿರುದ್ಧ-**

**ಆರೋಪಿ/ತರು** ಃ ಕಂದಸ್ವಾಮಿ ಮತ್ತು ಇತರರು

**-ಃದೋಷಾರೋಪಣೆಃ-**

**ಶ್ರೀ ವೈದ್ಯ ಶ್ರೀಕಾಂತ್,** ಬಿ.ಎಸ್‌ಇ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಕಂದಸ್ವಾಮಿ ಬಿನ್ ಚಂಕ್ರಪಾಣಿ, 45 ವರ್ಷ, ವ್ಯವಸಾಯ, ವಾಸಃಗಂಟೆಕಣಿವೆ, ತರೀಕೆರೆ.
2. ನಿರ್ಮಲ ಕೋಂ ಕಂದಸ್ವಾಮಿ , 42 ವರ್ಷ, ವ್ಯವಸಾಯ, ವಾಸಃಗಂಟೆಕಣಿವೆ, ತರೀಕೆರೆ.
3. ದೇವರಾಜ ಬಿನ್ ಕಂದಸ್ವಾಮಿ, 20 ವರ್ಷ, ಕೂಲಿ ಕೆಲಸ, ವಾಸಃಗಂಟೆಕಣಿವೆ, ತರೀಕೆರೆ.
4. ಲೋಕೇಶ ಬಿನ್ ಕಂದಸ್ವಾಮಿ, 19 ವರ್ಷ, ಕೂಲಿ ಕೆಲಸ, ವಾಸಃಗಂಟೆಕಣಿವೆ, ತರೀಕೆರೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿಃ19.08.2022 ರಂದು ಬೆಳಿಗ್ಗೆ 11-30 ರ ಸಮಯದಲ್ಲಿ ಚಾಸಾ-1 ರವರು ಅವರ ಅತ್ತೆ ಸರಸ್ವತಿ ರವರ ಬಾಬ್ತು ಜೋಡಿಕೋಡಿಹಳ್ಳಿ ಗ್ರಾಮದ ಸರ್ವೆ ನಂ.80 ರಲ್ಲಿನ ತೆಂಗಿನ ತೋಟದಲ್ಲಿ ತೆಂಗಿನ ಕಾಯಿಯನ್ನು ಕೀಳುತ್ತಿರುವಾಗ ಆರೋಪಿತರಾದ ನೀವು ಬಂದು ಸೂಳೆ ಮಕ್ಕಳ ಜಮೀನಿನ ವಿಚಾರದಲ್ಲಿ ಕೋರ್ಟ್ ನಲ್ಲಿ ಕೇಸ್ ಹಾಕಿರುವುದನ್ನು ವಾಪಸ್ಸು ತೆಗೆದುಕೊಳ್ಳುವವರೆಗೂ ತೆಂಗಿನಕಾಯಿಯನ್ನು ಈ ತೋಟದಲ್ಲಿ ಕೀಳಲು ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು **ಭಾರತೀಯ**

**ದಂಡ ಸಂಹಿತೆಯ ಕಲಂ.504 ಸಹಕಲಂ. 34** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀವು ಕಬ್ಬಿಣದ ರಾಡಿನಿಂದ ಚಾಸಾ-1 ರವರ ಎಡಗಣ್ಣಿನ ಉಬ್ಬಿನ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.324 ಸಹಕಲಂ 34** ರ ರೀತ್ಯಾ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 27.11.2023

Sd/-

ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಎ-1

ಎ-2

ಎ-3

ಎ-4

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ಎ-1

ಎ-2

ಎ-3

ಎ-4

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ

Sd/-

ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿತರ ಸಹಿಃ